ಆಯೋಜಿಸಲಾಗಿದೆ.

ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠಾಧಿಪತಿ ಶ್ರೀ ಸಿದ್ಧಲಿಂಗೇಶ್ವರ ಮಹಾಸ್ವಾಮಿಗಳು ಸಾನಿಧ್ಯ ವಹಿಸುವರು. ಜಿಲ್ಲೆಯ ತಾಲ್ಲೂಕು ಘಟಕ, ಗ್ರಾಮ ಘಟಕಗಳ ಸಮಾಜದ ಬಾಂಧವರು ಹಾಗೂ ತಾಲ್ಲೂಕು ಘಟಕ, ಯುವ ಘಟಕ, ನೌಕರರ ಘಟಕ, ಮಹಿಳಾ ಘಟಕದ ಪದಾಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಲು ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿ ರಶ್ಮಿ ಕೊಂಕದ್ ತಿಳಿಸಿದ್ದಾರೆ.

ಮೃತ್ಯುಂಜಯ ಸ್ವಾಮೀಜಿ ಸಲಹೆ ನೀಡಿದರು.

ನಗರದ ಚಿಂದೋಡಿ ಲೀಲಾ ಕಲ್ಯಾಣ ಮಂಟಪದಲ್ಲಿ ಕಾಯಕ ದಾಸೋಹ ಮಂಟಪದ ವತಿಯಿಂದ ಶ್ರಾವಣ ಮಾಸದ ಅಂಗವಾಗಿ ಏರ್ಪಡಿಸಿದ್ದ ಮನಸ್ಸಿನ ಶಾಂತಿಗಾಗಿ 'ಸಹಜ ಶಿವಯೋಗ' ಕಾರ್ಯಕ್ರಮದಲ್ಲಿ ಸಹಜ ಶಿವಯೋಗ ಪ್ರಾತ್ಯಕ್ಷಿಕೆ ನೀಡುವ ಮೂಲಕ ಅವರು ಮಾತನಾಡಿದರು.



## ಉದ್ಘಾಟನೆ...




ದಾವಣಗೆರೆ ನೇತಾಜಿ ಸುಭಾಷ್‌ಚಂದ್ರ ಬೋಸ್ ಒಳಾಂಗಣ ಕ್ರೀಡಾಂಗಣದಲ್ಲಿ ಗೋಜು. ರಿಯೋ ದೋ. ಮಿಷನ್ ಇಂಟರ್ ನ್ಯಾಷನಲ್ ಸಂಸ್ಥೆ ವತಿಯಿಂದ ಏರ್ಪಡಿಸಿದ್ದ ಕರಾಟೆ ಕುರಿತ ವಿಚಾರ ಸಂಕಿರಣವನ್ನು ಸಂಸ್ಥೆಯ ಅಂತಾರಾಷ್ಟ್ರೀಯ ಅಧ್ಯಕ್ಷ [illegible] ಉದ್ಘಾಟಿಸಿದರು.

## ಹೈ.ಕ. ವ್ಯಾಪ್ತಿಗೆ ಬರಲಿ

ದಾವಣಗೆರೆ, ಆ.12: ಕೇಂದ್ರ ಸರ್ಕಾರ ಇತ್ತೀಚಿಗೆ ಅತ್ಯಂತ ಹಿಂದುಳಿದ ರಾಜ್ಯದ ಆರು ಜಿಲ್ಲೆಗಳನ್ನು ಕಲಂ 371ರ ಅಡಿ ವಿಶೇಷ ಸ್ಥಾನಮಾನ ನೀಡಿದ್ದು, ಹರಪನಹಳ್ಳಿ ತಾಲ್ಲೂಕನ್ನು ಹೈದ್ರಾಬಾದ್ ಕರ್ನಾಟಕ ವಲಯದ ವ್ಯಾಪ್ತಿಗೆ ಸೇರಿಸುವಂತೆ ಯುಪಿಎ ಅಧ್ಯಕ್ಷೆ ಸೋನಿಯಾಗಾಂಧಿ ಅವರಿಗೆ ಶಾಸಕ ಡಾ.ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಅಬ್ದುಲ್ ಜಬ್ಬಾರ್, ಕೆಪಿಸಿಸಿ ಸದಸ್ಯ ಡಿ. ಬಸವರಾಜ್ ಮನವಿ ಮಾಡಿದ್ದಾರೆ.

ಶೀಘ್ರದಲ್ಲೇ ಹರಪನಹಳ್ಳಿ ತಾಲ್ಲೂಕಿಗೆ ವಿಶೇಷ ಅನುದಾನ ದೊರಕುವಂತೆ ಕಾಂಗ್ರೆಸ್ ಪಕ್ಷ ಪ್ರಮಾಣಿಕ ಪ್ರಯತ್ನ ಮಾಡಲಿದೆ ಎಂದು ತಿಳಿಸಿದ್ದಾರೆ.

# ದೈಹಿಕ ಸ್ವಾಸ್ಥ್ಯಕ್ಕೆ ಕರಾಟೆ ಸಹಕಾರಿ

ದಾವಣಗೆರೆ, ಆ. 12: ಕ್ರೀಡಾ, ಕರಾಟೆ

ಪಾರಂಪರಿಕ ಕರಾಟೆ) ಒಳಾರ್ಥದ ಬಗ್ಗೆ ಹಾಗೂ

ದಾವಣಗೆರೆಯಲ್ಲಿ ಉತ್ತಮ ಕರಾಟೆ ಪಟುಗಳಿದ್ದು,

# ಕರಾಟೆ ಆತ್ಮವಿಶ್ವಾಸ ವೃದ್ಧಿಗೆ ಸಹಾಯಕ

■ ಕರಾಟೆ ತರಬೇತಿ ಕಾರ್ಯಾಗಾರಕ್ಕೆ ಚಾಲನೆ ■ ಜಿಲ್ಲೆಯ 150 ಮಂದಿಗೆ ತರಬೇತಿ

- ಗ್ರ್ಯಾಂಡ್ ಮಾಸ್ಟರ್ ವಟನಾಬೆಯಿಂದ ಚಾಲನೆ
- ಏಕಾಗ್ರತೆ, ಆತ್ಮವಿಶ್ವಾಸ ವೃದ್ಧಿಗೆ ಕರಾಟೆ ಸಹಾಯಕ
- ಸೈಫಾ ಎನ್ನುವ ಕಲೆ ಶೈಲಿಯ ಬಗ್ಗೆ ಸಮಗ್ರ ತರಬೇತಿ

**ದಾವಣಗೆರೆ:** ನಗರದ ನೇತಾಜಿ ಸುಭಾಷ್ ಚಂದ್ರ ಬೋಸ್ ಒಳಾಂಗಣ ಕ್ರೀಡಾಂಗಣದಲ್ಲಿ ಜಪಾನ್‌ನ ಗ್ರ್ಯಾಂಡ್ ಮಾಸ್ಟರ್ ಹೆನ್ನಿ ಕೆನ್ನೋ ಹಿಡಿಯೋ ವಟನಾಬೆ ಕರಾಟೆ ತರಬೇತಿ ಕಾರ್ಯಾಗಾರಕ್ಕೆ ಭಾನುವಾರ ಚಾಲನೆ ನೀಡಿದರು.

ಜಪಾನ್‌ನ ಗೋಜುರಿಯೋ ಕರಾಟೆ -ದೋ ಮಿಶನ್ ಇಂಟರ್ ನ್ಯಾಶನಲ್ ಹಾಗೂ ಸ್ನಾಫರನ್ ವಾರಿಯರ್ಸ್ ಗುರುಕುಲಂನಿಂದ ಆಯೋಜಿಸಲಾಗಿದ್ದ ಕಾರ್ಯಾಗಾರದಲ್ಲಿ ಜಿಲ್ಲೆಯ 5ರಿಂದ 65 ವರ್ಷದೊಳಗಿನ 150 ಕರಾಟೆ ಪಟುಗಳು ಪಾರಂಪರಿಕ ಕರಾಟೆ ಕುರಿತು ತರಬೇತಿ ಪಡೆದರು.

ಕರಾಟೆ ಅಸೋಸಿಯೇಶನ್ ಆಫ್ ಇಂಡಿಯಾದ ರಾಷ್ಟ್ರೀಯ ಉಪಾಧ್ಯಕ್ಷ ಕ್ಯೋಶಿ ಎಂ. ಶ್ರೀನಿವಾಸಲು ಮಾತನಾಡಿ, ಇದು ಪ್ರಾರಂಭದ ಹಂತವಾಗಿದ್ದು ಕರಾಟೆ ಪಟುಗಳು ಏಕಾಗ್ರತೆ ಹಾಗೂ ಆತ್ಮ ವಿಶ್ವಾಸ ಹೆಚ್ಚಿಸಿಕೊಳ್ಳುವಲ್ಲಿ ಸಹಾಯಕವಾಗುತ್ತದೆ ಎಂದು ಪತ್ರಿಕೆಗೆ ತಿಳಿಸಿದರು.

ಉಸಿರಾಟದ ನಿಯಮಿತ ಪ್ರಕ್ರಿಯೆಯಿಂದಾಗಿ ದೇಹದ ಒಳಗಿನ ಎಲ್ಲ ಭಾಗಗಳಿಗೆ ಆಮ್ಲಜನಕ ದೊರೆತು ಅವು ಉದ್ದೀಪನಗೊಳ್ಳುತ್ತವೆ. ಮುಂದಿನ ಹಂತದಲ್ಲಿ ಕಿನ್- ಹಿನ್ ಎನ್ನುವ ಶೈಲಿ ಹೇಳಿಕೊಡಲಾಗುತ್ತದೆ. ನಂತರ ನಮ್ಮ ಎದುರಿಗೆ ಇರುವವರ ಮೇಲೆ ದಾಳಿ ಮಾಡುವ ಕ್ರಮವನ್ನು ಹೇಳಿ ಕೊಡಲಾಗುವುದು.

ಪಾರಂಪರಿಕ ಕಥಾ, ಥೈ-ಚ್ಯೋ ಬ್ರೀದಿಂಗ್ ಮೇಥೆಡ್, ಹಾರ್ಡ್, ಅ್ಯಂಡ್ ಸಾಫ್ಟ್, ಹಿಟ್ಟಿಂಗ್, ಬ್ಲಾಕಿಂಗ್, ಕಿಕ್ ಹೇಳಿಕೊಡಲಾಗುವುದು. ಮುಖ್ಯವಾಗಿ ರಣಾಂಗಣದಲ್ಲಿ ಹೋರಾಡಲು ಸೈಫಾ ಎನ್ನುವ ಕಲೆ ಶೈಲಿಯ ಬಗ್ಗೆ ಸಮಗ್ರವಾಗಿ ತರಬೇತಿ ನೀಡಲಾಗುವುದು ಎಂದರು.

ಶಿಬಿರದಲ್ಲಿ 6 ಜನ ಮಹಿಳೆಯರು ಶಾಸ್ತ್ರೀಯ ಕರಾಟೆ ಕಲಿಯಲು ಮುಂದೆ ಬಂದು ತರಬೇತಿ ಪಡೆದಿದ್ದು ವಿಶೇಷವಾಗಿತ್ತು. ತರಬೇತಿಯಲ್ಲಿ ಸಾವಳಗಿ ನಾಗರಾಜ್, ಎಂ. ಸದಾಶಿವ, ರಾಜನಹಳ್ಳಿ ಮಂಜುನಾಥ್, ಮಲ್ಲಿಕಾರ್ಜುನ್, ವಿಜಯ ಅಗಡಿ, ಶ್ರೀಕಾಂತ ಪಾಲ್ಗೊಂಡಿದ್ದರು.



ನೇತಾಜಿ ಸುಭಾಷ್‌ಚಂದ್ರ ಬೋಸ್ ಒಳಾಂಗಣ ಕ್ರೀಡಾಂಗಣದಲ್ಲಿ ಜಪಾನ್‌ನ ಗ್ರ್ಯಾಂಡ್ ಮಾಸ್ಟರ್ ಹೆನ್ನಿ ಕೆನ್ನೋ ಹಿಡಿಯೋ ವಟನಾಬೆ ಕರಾಟೆ ತರಬೇತಿ ಕಾರ್ಯಾಗಾರಕ್ಕೆ ಭಾನುವಾರ ಚಾಲನೆ ನೀಡಿದರು.

# ಜಾದೂ ಕಲೆ ಉಳಿಸಲು ಸರ್ಕಾರ ಮುಂದಾಗಲಿ

# ದನಗಾಹಿ

# ಆತ್ಮ ರಕ್ಷಣೆಯ ಕಲೆ ಕರಾಟೆ ಬಹುಪಯೋಗಿ



ದಾವಣಗೆರೆಯಲ್ಲಿ ಕರಾಟೆ ಕುರಿತ ವಿಚಾರ ಸಂಕಿರಣದಲ್ಲಿ ಜಪಾನಿನ ಗೋಜುರಿಯೋ, ಕರಾಟೆ ಕೋಚ್ ಹನ್ಸಿ ಕೆನ್‌ಷೂ ಹಿಡಿಯೊ ಒಟಾನಬಿ ಕರಾಟೆ ಪಟುಗಳಿಗೆ ತರಬೇತಿ ನೀಡಿದರು. ರಾಜ್ಯದ ನಾನಾ ಜಿಲ್ಲೆಗಳಿಂದ ಆಗಮಿಸಿದ್ದ 150ಕ್ಕೂ ಹೆಚ್ಚು ಆಸಕ್ತರಿದ್ದರು.

■ ವಿಕ ಸುದ್ದಿಲೋಕ ದಾವಣಗೆರೆ

ಆತ್ಮ ರಕ್ಷಣೆಗಾಗಿ ಹುಟ್ಟಿಕೊಂಡ ಕರಾಟೆ ಕಲೆ ಎಲ್ಲರಿಗೂ ಬಹು ಉಪಯೋಗಿ ಎಂದು ರಾಷ್ಟ್ರೀಯ ಕರಾಟೆ ಸಂಸ್ಥೆ ಅಧ್ಯಕ್ಷ ಎಂ. ಶ್ರೀನಿವಾಸಲು ಹೇಳಿದ್ದಾರೆ.

ನಗರದ ನೇತಾಜಿ ಒಳಾಂಗಣ ಕ್ರೀಡಾಂಗಣದಲ್ಲಿ ಗೋಜು ರಿಯೋ ದೇ ಮಿಷನ್ ಇಂಟರ್ ನ್ಯಾಷನಲ್ ಸಂಸ್ಥೆ ಏರ್ಪಡಿಸಿದ್ದ ಕರಾಟೆ ಕುರಿತ ವಿಚಾರ ಸಂಕಿರಣದಲ್ಲಿ ಭಾನುವಾರ ಮಾತನಾಡಿದರು.

ಕರಾಟೆಯನ್ನು ಕೇವಲ ಕ್ರೀಡೆಯಾಗಿ ಸ್ವೀಕರಿಸದೆ ಕಲೆಯಾಗಿ ಬಳಸಬೇಕು. ತಮಿಳುನಾಡಿನಲ್ಲಿ ಶಾಲಾ ಹಂತದಲ್ಲೇ ಮಕ್ಕಳಿಗೆ ಇದನ್ನು ಕಡ್ಡಾಯಗೊಳಿಸಲಾಗಿದೆ. ಇಲ್ಲಿನ ಸರಕಾರ ಕೂಡ ಮಕ್ಕಳಿಗೆ ಕಲಿಸುವ ಬಗ್ಗೆ ನಿರ್ಧಾರ ಕೈಗೊಳ್ಳಬೇಕು. ದಕ್ಷಿಣ ಭಾರತದಲ್ಲಿ ಇತ್ತೀಚೆಗೆ ಹೆಣ್ಣು ಮಕ್ಕಳು ಕರಾಟೆ ಕಲಿಕೆಗೆ ಒಲವು ತೋರುತ್ತಿದ್ದಾರೆ ಎಂದು ಹೇಳಿದರು.

ದೇಶದಲ್ಲಿ 60 ಲಕ್ಷಕ್ಕೂ ಅಧಿಕ ಮಂದಿ ಕರಾಟೆ ಕಲಿಯುತ್ತಿದ್ದಾರೆ. ಕರಾಟೆ ಪಟುಗಳಿಗೆ ದಾವಣಗೆರೆಯ ಕೆಟಿಜೆ ನಗರದಲ್ಲಿ ಕರಾಟೆ ಶಾಲೆ ಆರಂಭಿಸಲಾಗಿದೆ ಎಂದು ಮಾಹಿತಿ ನೀಡಿದರು.

ಜಪಾನ್‌ನ ಕರಾಟೆ ಮಾಸ್ಟರ್ ಹನ್ಸಿ ಕೆನ್‌ಷೂ ಹಿಡಿಯೊ ಒಟಾನಬಿ, ರಾಜ್ಯದ ನಾನಾ ಜಿಲ್ಲೆಗಳಿಂದ ಆಗಮಿಸಿದ್ದ 150ಕ್ಕೂ ಹೆಚ್ಚು ಪಟುಗಳಿಗೆ ಕರಾಟೆ ತರಬೇತಿ ನೀಡಿದರು.

ಹಾವೇರಿ ಗುಪ್ತದಳದ ಡಿವೈಎಸ್‌ಪಿ ಐ.ಜಿ. ಮಂಜುನಾಥ್, ಎಂ. ಸದಾಶಿವಂ, ಸಾವಳಗಿ ನಾಗರಾಜ್, ರಾಜನಹಳ್ಳಿ ಮಂಜುನಾಥ್, ಕುಬೇರನಾಯ್ಕ, ವಿಜಯ ಆಗಡಿ, ಹುಬ್ಬಳ್ಳಿ ಶ್ರೀಕಾಂತ್ ಉಪಸ್ಥಿತರಿದ್ದರು.

---

**ರಾಧೆ-ಕೃಷ್ಣ**



ಹರಿಹರದ ಇಂದಿರಾನಗರದ ಶಾಂತಿ ನಿಕೇತನ ಪ್ರಿನ್ಸರಿ ಶಾಲೆಯಲ್ಲಿ ಕೃಷ್ಣಾಷ್ಟಮಿ ಅಂಗವಾಗಿ ಈಚೆಗೆ ರಾಧೆ-ಕೃಷ್ಣರ ವೇಷ ಧರಿಸಿದ್ದ ಚಿಣ್ಣರು.

ಪ್ರಜಾವಾಣಿ
ದಾವಣಗೆರೆ ಜಿಲ್ಲೆ

**ಪರಿಸರ**

ಹರಪನಹಳ್ಳಿಯಲ್ಲಿ ಭಾನುವಾರ ಬಿಸಿಎಂ ಮೆಟ್ರಿಕ್‌ನಂತರದ ಬಾಲಕರ ವಿದ್ಯಾರ್ಥಿನಿಲಯದ ಆವರಣದಲ್ಲಿ ಹಸಿರು ದಿನಾಚರಣೆ ಅಂಗವಾಗಿ ನಿಲಯಾರ್ಥಿಗಳು ಸಸಿ ನೆಡುವ ಮೂಲಕ ಪರಿಸರ ಪ್ರೇಮ ಮೆರೆದರು. ಬಿ.ಎಚ್. ಚಂದ್ರಪ್ಪ ಇದ್ದರು.



*ವಿಚಾರ ಸಂಕಿರಣದಲ್ಲಿ ಕರಾಟೆ ತರಬೇತುದಾರ ಹಂಶಿ ಕೆನ್‌ಷೂ ಹಿಡಿಯೊ ಒಟಾನಬಿ ಅಭಿಮತ*

# ಆಂತರಿಕ ಸದೃಢತೆಗೆ ಕರಾಟೆ ಪೂರಕ

ಪ್ರಜಾವಾಣಿ ವಾರ್ತೆ





ದಾವಣಗೆರೆಯ ನೇತಾಜಿ ಸುಭಾಷ್‌ಚಂದ್ರ ಬೋಸ್ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ಗೋಜು.ರಿಯೋ. ದೊ. ಮಿಷನ್ ಇಂಟರ್‌ನ್ಯಾಷನಲ್ ಸಂಸ್ಥೆ ಆಯೋಜಿಸಿದ್ದ ಕರಾಟೆ ಕುರಿತ ವಿಚಾರ ಸಂಕಿರಣ ಉದ್ಘಾಟನಾ ಸಮಾರಂಭದಲ್ಲಿ ಜಪಾನ್‌ನ ಹಂಶಿ ಕೆನ್‌ಷೂ ಹಿಡಿಯೊ ಒಟಾನಬಿ, ಕೋಶಿ ಎಂ. ಶ್ರೀನಿವಾಸಲು, ಡಿವೈಎಸ್‌ಪಿ ಐ.ಜಿ. ಮಂಜುನಾಥ್, ರಾಜನಹಳ್ಳಿ ಮಂಜುನಾಥ್, ಸಾವಳಗಿ ನಾಗರಾಜ್, ಕುಬೇರನಾಯ್ಕ ಇದ್ದರು (ಎಡಚಿತ್ರ). ಸಂಸ್ಥೆಯ ಅಂತರರಾಷ್ಟ್ರೀಯ ಅಧ್ಯಕ್ಷ ಹಂಶಿ ಕೆನ್‌ಷೂ ಹಿಡಿಯೊ ಒಟಾನಬಿ ಪ್ರಾತ್ಯಕ್ಷಿಕೆ ನೀಡಿದರು.

ದಾವಣಗೆರೆ: ಕರಾಟೆ ಕೇವಲ ದೈಹಿಕ ಕಸರತ್ತು ಅಲ್ಲ. ಅದೊಂದು ಆಂತರಿಕ ಸದೃಢತೆಯನ್ನು ತಂದು ಕೊಡಬಲ್ಲ ಅತ್ಯಂತ ನಯ, ನಾಜೂಕಿನ ಕಲೆ ಎಂಬುದನ್ನು ಜಪಾನ್‌ನ ಅಂತರರಾಷ್ಟ್ರೀಯ ಕರಾಟೆ ತರಬೇತುದಾರ ಹಂಶಿ ಕೆನ್‌ಷೂ ಹಿಡಿಯೊ ಒಟಾನಬಿ ಪ್ರಾತ್ಯಕ್ಷಿಕೆ ಮೂಲಕ ಕರಾಟೆ ಆಸಕ್ತರ ಮುಂದೆ ತೆರೆದಿಟ್ಟರು.

ನಗರದ ನೇತಾಜಿ ಸುಭಾಷ್‌ಚಂದ್ರ ಬೋಸ್ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ಗೋಜು.ರಿಯೋ. ದೊ. ಮಿಷನ್ ಇಂಟರ್‌ನ್ಯಾಷನಲ್ ಸಂಸ್ಥೆಯಿಂದ ಆಯೋಜಿಸಿದ್ದ ಕರಾಟೆ ಕುರಿತ ವಿಚಾರ ಸಂಕಿರಣದಲ್ಲಿ ಒಟಾನಬಿ ಅವರು, ಕರಾಟೆ ಪಟುಗಳೊಂದಿಗೆ ಪರಸ್ಪರ ಚರ್ಚೆ, ಸಂವಾದ ನಡೆಸುವುದರೊಂದಿಗೆ ಹತ್ತು ಹಲವು ತಪ್ಪುಗಳನ್ನು ತಿದ್ದಿ, ಮಾರ್ಗದರ್ಶನ ನೀಡಿದರು.

ತರಬೇತಿ ಮಧ್ಯೆ ಕೊಂಚ ಬಿಡುವು ಮಾಡಿಕೊಂಡು ಮಾತನಾಡಿದ ಹಂಶಿ ಕೆನ್‌ಷೂ ಹಿಡಿಯೊ ಒಟಾನಬಿ, ಗೋಜು.ರಿಯೋ. ದೊ.(ಜಪಾನಿನ ಪಾರಂಪರಿಕ ಕರಾಟೆ) ಸಾಂಪ್ರದಾಯಿಕ ಕರಾಟೆ ಕಲಿಕೆಗೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಕ್ರೀಡಾ ಕರಾಟೆಯಂತೆ ಇಲ್ಲಿ ಕಸರತ್ತಿಗೆ ಆದ್ಯತೆ ಇಲ್ಲ. ವ್ಯಕ್ತಿಯನ್ನು ಆಂತರಿಕವಾಗಿ ಸದೃಢಗೊಳಿಸುವುದು ಮುಖ್ಯ ಎಂದು ಮಾಹಿತಿ ನೀಡಿದರು.

ಕರಾಟೆಯಲ್ಲಿ ಉಸಿರಾಟ ಪ್ರಕ್ರಿಯೆ ಪ್ರಮುಖ. 'ಇಂಟರ್ನಲ್ ಫೈಟಿಂಗ್ ಮೂವ್‌ಮೆಂಟ್' ಅದಕ್ಕಿಂತ ವಿಭಿನ್ನವಾದುದು ಎಂದ ಅವರು, ಪರಸ್ಪರ 'ಮ್ಯಾನ್ ಟಚ್', 'ಲಾಕ್' ಮತ್ತು ಕ್ಯಾಚ್‌ನ ತಂತ್ರಗಾರಿಕೆಯ ಪ್ರಾತ್ಯಕ್ಷಿಕೆ ತೋರಿಸಿಕೊಟ್ಟರು.

ನಂತರ ವಿವಿಧ ತಂತ್ರಗಾರಿಕೆ ತೋರಿಸಿಕೊಡುವ ಮೂಲಕ ಕರಾಟೆಪಟುಗಳಲ್ಲಿದ್ದ ಗೊಂದಲದ ಪ್ರಶ್ನೆಗಳಿಗೆ ಉತ್ತರಿಸಿ, ತಪ್ಪುಗಳನ್ನು ತಿದ್ದಿದರು. ತರಬೇತಿ ಆರಂಭದಲ್ಲಿ ಧ್ಯಾನ ಅಭ್ಯಾಸ ಮಾಡಿಸಲಾಯಿತು.

ಸಾಂಪ್ರದಾಯಿಕ ಕರಾಟೆಯಿಂದ ದೈಹಿಕ, ಮಾನಸಿಕ, ಆಧ್ಯಾತ್ಮಿಕ ಮೂರೂ ಕ್ಷೇತ್ರದಲ್ಲಿ ಸಾಧನೆ ಮಾಡಲು ಸಾಧ್ಯ ಎಂದು ಹೇಳುವುದನ್ನು ಅವರು ಮರೆಯಲಿಲ್ಲ.

ಸಂಸ್ಥೆಯ ರಾಷ್ಟ್ರಾಧ್ಯಕ್ಷ ಕೋಶಿ ಎಂ. ಶ್ರೀನಿವಾಸಲು ಮಾತನಾಡಿ, ಸಾಂಪ್ರದಾಯಿಕ ಕರಾಟೆಗೆ ಚೀನಾ ಮತ್ತು ಅಮೆರಿಕ ಹೆಚ್ಚು ಮಹತ್ವ ನೀಡುತ್ತಿವೆ. ಭಾರತದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸರಿಯಾಗಿ ಸ್ಪಂದಿಸುತ್ತಿಲ್ಲ. ಕನಿಷ್ಠ ಪೊಲೀಸ್ ಸಿಬ್ಬಂದಿಗಾದರೂ ಈ ಕರಾಟೆ ಕಲೆಯನ್ನು ಕಲಿಸಲು ಸರ್ಕಾರ ಮುಂದಾಗಬೇಕು ಎಂದು ಒತ್ತಾಯಿಸಿದರು.

ತರಬೇತಿ ಸಂದರ್ಭದಲ್ಲಿ ಹಾವೇರಿಯ ಗುಪ್ತದಳದ ಡಿವೈಎಸ್‌ಪಿ ಐ.ಜಿ. ಮಂಜುನಾಥ್, ರಾಜನಹಳ್ಳಿ ಮಂಜುನಾಥ್, ಸಾವಳಗಿ ನಾಗರಾಜ್, ಕುಬೇರನಾಯ್ಕ, ಎಂ. ಸದಾಶಿವಂ, ಎಂ.ಕೆ. ರವಿ, ನಾರಾಯಣ ಪೂಜಾರಿ, ಶ್ರೀಕಾಂತ, ಮಲ್ಲಿಕಾರ್ಜುನ ಇದ್ದರು.

---

*ತುಂಗಾ ಏತ ನೀರಾವರಿ ಯೋಜನೆಗೆ ₹ 72 ಕೋಟಿ*

## ಸವಳಂಗ ಹೊಸಕೆರೆಗೆ ತುಂಗಾ ನೀರು

ಪ್ರಜಾವಾಣಿ ವಾರ್ತೆ

## ಹೋಂಸ್ಟೇ ಪ್ರಕರಣ: ಸಿಬಿಐ ತನಿಖೆಗೆ ಆಗ್ರಹ

ದಾವಣಗೆರೆ: ಮಂಗಳೂರಿನಲ್ಲಿ ಈಚೆಗೆ ಹೋಂಸ್ಟೇ ಮೇಲೆ ನಡೆದ

## ಆಸರೆ ಹಂಚಿಕೆಯಲ್ಲಿ ಅವ್ಯವಹಾರ: ವಿತರಣೆ ತಡೆಗೆ ಮನವಿ

ಪ್ರಜಾವಾಣಿ ವಾರ್ತೆ

ಹರಪನಹಳ್ಳಿ: ತಾಲ್ಲೂಕಿನ ಹಳೇ ಕಲ್ಲಹಳ್ಳಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರಾಮದ

ಕ್ರಮದಲ್ಲಿ ನ್ಯಾ. ರವೀಂದ್ರ
ಹೊನೊಲಿ
ಮಾತನಾಡಿದರು.

ರ್‌ನಲ್ಲಿ ಆ.15ರಂದು ಬೆಳಿಗ್ಗೆ 7.30ಕ್ಕೆ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ ಎಚ್.ಕೆ. ರಾಮಚಂದ್ರಪ್ಪ ಅಧ್ಯಕ್ಷತೆಯಲ್ಲಿ ನಿವೃತ್ತ ಕಾರ್ಯಪಾಲಕ ಅಭಿಯಂತರ ಜಿ. ರಂಗಪ್ಪ ಧ್ವಜಾರೋಹಣ ನೆರವೇರಿಸಿದ

# ಶಾಲೆಯಲ್ಲಿ ಕರಾಟೆ ಕಡ್ಡಾಯವಾಗಲಿ

## ರಾಜ್ಯ ಮಟ್ಟದ ಕರಾಟೆ ಕುರಿತ ವಿಚಾರ ಸಂಕಿರಣ । ಕರಾಟೆ ಆತ್ಮರಕ್ಷಣೆ ಕಲೆ: ಶ್ರೀನಿವಾಸ್

ದಾವಣಗೆರೆ: ಕರಾಟೆ ಕೇವಲ ಕ್ರೀಡೆಯಲ್ಲ. ಅದು ಆತ್ಮರಕ್ಷಣೆಗಾಗಿರುವ ಸಾಂಪ್ರಾದಾಯಿಕ ಕಲೆ. ಅದನ್ನು ಉಳಿಸಲು ದೇಶಾದ್ಯಂತ ಕರಾಟೆ ಜನಪ್ರಿಯಗೊಳಿಸುವ ಪ್ರಯತ್ನ ನಡೆಸಿರುವುದಾಗಿ ಗೋಜುರಿಯೋ ಕರಾಟೆ ದೆ ಮಿಷನ್ ಇಂಟರ್ ನ್ಯಾಷನಲ್ ಸಂಸ್ಥೆಯ ರಾಷ್ಟ್ರೀಯ ಉಪಾಧ್ಯಕ್ಷ, 7ನೇ ಬ್ಲಾಕ್ ಬೆಲ್ಟ್ ಕೋಚ್, ಚೆನ್ನೈನ ನಿವೃತ್ತ ಪೊಲೀಸ್ ಅಧಿಕಾರಿ ಎಂ. ಶ್ರೀನಿವಾಸುಲು ಹೇಳಿದರು.

ನಗರದ ನೇತಾಜಿ ಸುಭಾಶ್ಚಂದ್ರಬೋಸ್ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ಗೋಜುರಿಯೋ ಕರಾಟೆ ದೆ ಮಿಷನ್ ಇಂಟರ್ ನ್ಯಾಷನಲ್ ಸಂಸ್ಥೆಯಿಂದ ಏರ್ಪಡಿಸಿದ್ದ ರಾಜ್ಯ ಮಟ್ಟದ ಕರಾಟೆ ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಮನುಷ್ಯನನ್ನು ದೈಹಿಕ, ಮಾನಸಿಕವಾಗಿ ಸ್ವಸ್ಥಗೊಳಿಸುವ ಕ್ರೀಡೆ ಕರಾಟೆ ಆಂತರಿಕವಾಗಿ ಕರಾಟೆಪಟುವನ್ನು ಸದೃಢಗೊಳಿಸುತ್ತದೆ ಎಂದರು.

**ಕರಾಟೆ ತರಬೇತಿ ಕೊಡಿ:** ತಮಿಳುನಾಡಿನಲ್ಲಿ ಎಲ್ಲಾ ಶಾಲೆಯಲ್ಲೂ ಮಕ್ಕಳಿಗೆ ಕರಾಟೆ ತರಬೇತಿ ನೀಡುತ್ತಿದ್ದು, ಕರ್ನಾಟಕದಲ್ಲೂ ಆದಾಗಬೇಕು. ಪೊಲೀಸ್ ಅಧಿಕಾರಿ, ಸಿಬ್ಬಂದಿಗೂ ಕರಾಟೆ ತರಬೇತಿ ಕೊಡಿಸಬೇಕು ಎಂದು ಆಗ್ರಹಿಸಿದರು.



ವಿಚಾರ ಸಂಕಿರಣವನ್ನು ಜಪಾನಿನ ಹನ್ಸಿ ಕೆನ್ಸು ಹಿಟಿಯೋ ಒತಾನಬೆ ಉದ್ಘಾಟಿಸಿದರು.

ಗೋಜುರಿಯೋ ಕರಾಟೆ ಬಗ್ಗೆ ಉತ್ತರ ಭಾರತೀಯ ಹೆಣ್ಣು ಮಕ್ಕಳು ಆಸಕ್ತಿ ತೋರುತ್ತಿದ್ದು, ದಕ್ಷಿಣ ಭಾರತದ ಹೆಣ್ಣು ಮಕ್ಕಳೂ ಕರಾಟೆ ಬಗ್ಗೆ ಆಸಕ್ತಿ ಹೊಂದಬೇಕು. ಇದೇ ಹಿನ್ನೆಲೆಯಲ್ಲಿ ಜಪಾನಿನ ಕರಾಟೆ ಮಾಸ್ಟರ್ ಹನ್ಸಿ ಕೆನ್ಸು ಹಿಟಿಯೋ ಒತಾನಬೆ ಅವರಿಗೆ ಭಾರತಕ್ಕೆ ಕರೆಸಿಕೊಂಡಿದ್ದೇವೆ. ಕರಾಟೆ ತರಬೇತಿ, ಅದರ ಅರ್ಥ, ಕರಾಟೆಪಟುಗಳ ಅನುಮಾನಗಳಿಗೆ ಹಿಟಿಯೋ ಒತಾನಬೆ ಪ್ರಾತ್ಯಕ್ಷಿಕೆ ಮೂಲಕ ಸೂಕ್ತ ಮಾರ್ಗದರ್ಶನ ನೀಡಲಿದ್ದಾರೆ ಎಂದು ಶ್ರೀನಿವಾಸುಲು ತಿಳಿಸಿದರು.

ಕರಾಟೆ ಬಗ್ಗೆ ಕೆಲ ತಪ್ಪು ಗ್ರಹಿಕೆಗಳಿದ್ದು, ಅದನ್ನು ಹೋಗಲಾಡಿಸುವ ಪ್ರಯತ್ನ ಇಲ್ಲಿ ಮಾಡಲಾಗುತ್ತಿದೆ. ಆಂತರಿಕ ಮತ್ತು ಆತ್ಮರಕ್ಷಣೆಗೆ ಬೇಕಾದ ಬುದ್ಧಿಷ್ಟ್ ವಾಕಿಂಗ್ ಮೆಡಿಟೇಷನ್, ಉಸಿರಾಟ, ಚಲನಕ್ರಮ ಮತ್ತು ಜಪಾನಿನ ಪಾರಂಪರಿಕ ಕರಾಟೆ ಗೋಜುರಿಯೋ ದೋಒಳಾರ್ಥ, ಬುಬೀಷಿ ಟ್ರೆಡಿಷನಲ್ ಕರಾಟೆ ಹೀಗೆ ಹಲವಾರು ಸಾಂಪ್ರಾದಾಯಿಕ ಕರಾಟೆ ಬಗ್ಗೆ ತಿಳಿಸಲಾಗುತ್ತಿದೆ. ಶಾಲಾ- ಕಾಲೇಜು ವಿದ್ಯಾರ್ಥಿಗಳು, ಯುವ ಜನಾಂಗ, ಪೊಲೀಸ್ ಇಲಾಖೆ ಅಧಿಕಾರಿ, ಸಿಬ್ಬಂದಿ ಕರಾಟೆ ತರಬೇತಿ ಕಡ್ಡಾಯಗೊಳಿಸಬೇಕಿದೆ ಎಂದು ಅವರು ಹೇಳಿದರು. 65 ವರ್ಷವಾದರೂ ಸಹ ಜಪಾನಿನ ಹನ್ಸಿ ಕೆನ್ಸು ಹಿಟಿಯೋ ಒತಾನಬೆ ತಮ್ಮ ಅನುಭವ, ಸಾಂಪ್ರಾದಾಯಿಕ ಕರಾಟೆ ಪಟ್ಟುಗಳನ್ನು ಪ್ರದರ್ಶಿಸಿದರು.

ಹಾವೇರಿ ಗುಪ್ತದಳ ವಿಭಾಗದ ಹಿರಿಯ ಕರಾಟೆಪಟುಗಳಾದ ಹಾವೇರಿ ಜಿಲ್ಲೆ ಗುಪ್ತಚರ ವಿಭಾಗ ಪೊಲೀಸ್ ಉಪಾಧೀಕ್ಷಕ, ಕರಾಟೆ ಸಂಸ್ಥೆ ರಾಜ್ಯಾಧ್ಯಕ್ಷ ಐ.ಜಿ. ಮಂಜುನಾಥ, ತರಬೇತುದಾರ ಸಾವಳಗಿ ನಾಗರಾಜ, ಚೆನ್ನೈನ ಎಂ. ಸದಾಶಿವಂ, ರಾಜನಹಳ್ಳಿ ಮಂಜುನಾಥ, ಬಂಜಾರ ಯುವ ಸೇನೆ ಅಧ್ಯಕ್ಷ, ಕರಾಟೆ ತರಬೇತುದಾರ ಕುಬೇರನಾಯ್ಕ, ವಿಜಯ ಆಗಡಿ, ಹುಬ್ಬಳ್ಳಿ ಶ್ರೀಕಾಂತ ಮತ್ತಿತರರು ಇದ್ದರು.

## ಕಾನೂನು ಅರಿವು ಅಗತ್ಯ: ನ್ಯಾ. ರವೀಂದ್ರ

ಹೊನ್ನಾಳಿ: ಕಾನೂನು ಸಾಕ್ಷರತೆಯಿಂದ ಮನುಷ್ಯ ಎಲ್ಲಾ ರೀತಿಯ ಸಾಮಾಜಿಕ ದೌರ್ಜನ್ಯದಿಂದ ಹೊರಬಹುದಾಗಿದ್ದು, ಕಾನೂನು ಸೇವಾ ಸಮಿತಿ ಮೂಲಕ ಪ್ರತಿ ಗ್ರಾಮಗಳಿಗೂ ಕಾನೂನು ಸಾಕ್ಷರತಾ ಕಾರ್ಯಕ್ರಮಗಳ ಮೂಲಕ ಕಾನೂನು ಬಗ್ಗೆ ಅರಿವು ಮೂಡಿಸುವ ...

...ಗಿದೆ. ಕಾನೂನು ನೆರವಿಗೆ ಸಂಬಂಧಿಸಿದಂತೆ ಹಲವು ಸೌಲಭ್ಯಗಳ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಕಾನೂನು ನೆರವು ಸಮಿತಿ ಮೂಲಕ ಪಡೆದುಕೊಳ್ಳಬಹುದಾಗಿದೆ ಎಂದು ತಿಳಿಸಿದರು.

ಶಾಲಾ ಮುಖ್ಯ ಶಿಕ್ಷಕ ಕೆ.ಎಚ್. ಮಂಜಾನಾಯ್ಕ ವಿಶೇಷವಾಗಿ ವಿದ್ಯಾರ್ಥಿಗಳೂ ಕೂಡ ಕಾನುನುಗಳ ಬಗ್ಗೆ ...

## ಯೋಗ ಕಲಿತು ನಿರೋಗಿಗ...

---

ಫಲಾನುಭವಿಗಳಿಗೆ ಸವಲತ್ತುಗಳನ್ನು ಬಾಗಿಲಿಗೆ ತಲುಪಿಸುವ ಕಾರ್ಯಕ್ರಮ ಯಾಗಿದೆ, ರಾಜೀವ್ ಗಾಂಧಿ ಸಬ್ ಹಸ್ತಾಂತರಿಸಲಾಯಿತು.

## ...ಡ್ಡಿ ಪತ್ನಿ ರಾಜಕೀಯಕ್ಕೆ ?

...ಮ ಗಣಗಾರಿಕೆ, ಬೇಲ್ ಡೀಲ್ ಪ್ರಕರಣದಲ್ಲಿ ...ರ ಜೈಲು ಪಾಲಾದ ನಂತ ಮಾಜಿ ಸಚಿವ ಗಾಲಿ ...ಅರುಣಾಲಕ್ಷ್ಮಿ ಸಕ್ರಿಯ ರಾಜಕಾರಣಕ್ಕೆ ಧುಮುಕಲು ...ಬಂದಿದೆ.

...ಬದಲ್ಲಿ ನಡೆದಿರುವ ಘಟನಾವಳಿಗಳ ಹಿನ್ನೆಲೆಯಲ್ಲಿ ...ಂಡಿದ್ದಾರೆ ಎನ್ನಲಾಗಿದೆ. ಬಿಎಸ್‌ಆರ್ ಕಾಂಗ್ರೆಸ್ ...ಕೆ ಮಾಡಿ ಹೆಚ್ಚಿನ ಸ್ಥಾನಗಳನ್ನು ಗೆಲ್ಲಿಸಬೇಕು ಎಂಬ ...ತ್ರದ ಕಾರ್ಯಕರ್ತರೊಂದಿಗೆ ತಮ್ಮ ನಿವಾಸದಲ್ಲಿ ...ದ್ದಾರೆ. ಇದಕ್ಕೂ ಮುನ್ನ ತಮ್ಮ ನಿವಾಸದಲ್ಲಿ ಪೂಜೆ ...ಮುಖಂಡರೊಂದಿಗೆ ರಾಜಕೀಯಕ್ಕೆ ಧುಮುಕುವ

...ಮ ಗಣಗಾರಿಕೆ ಪ್ರಕರಣದಲ್ಲಿ ಜೈಲು ಸೇರಿಕೊಂಡು ...ು ವರ್ಷ ಪೂರ್ಣವಾಗಲಿದೆ. ಪತಿಗೆ ಜಾಮೀನು ...ಯಾಧೀಶರಿಗೆ ಲಂಚ ಕೊಟ್ಟ ಪ್ರಕರಣದಲ್ಲಿ ಈಗ ...ೋಮಶೇಖರ ರೆಡ್ಡಿ ಕೂಡ ಜೈಲು ಪಾಲಾಗಿದ್ದಾರೆ. ...ಅವರ ಸಂಬಂಧಿಕ ಸುರೇಶ್ ಕೂಡ ಬೇಲ್‌ಗಾಗಿ ...ಸೇರಿಕೊಂಡಿದ್ದಾರೆ. ಒಟ್ಟಾರೆ ರೆಡ್ಡಿ ಕುಟುಂಬದ ...ಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

... ಪ್ರಕರಣದಲ್ಲಿ ಮಾಜಿ ಸಚಿವ ಶ್ರೀರಾಮುಲು ...ಲ್ಲಿ ಎಸಿಬಿ ಅಧಿಕಾರಿಗಳ ಮುಂದೆ ವಿಚಾರಣೆಗೆ ...ರಾದಾಗ ಏನೋ ಎಂಬ ಆತಂಕ ಅರುಣಾ ಲಕ್ಷ್ಮಿ ...ವಾ ಪತಿ ಜನಾರ್ಧನ ರೆಡ್ಡಿ ಸೂಚನೆ ಮೇರೆಗೆ ...ಲಾಗಿದೆ.

## ...ಲಾಖೆಗೆ ಮುತ್ತಿಗೆ

## ನಗರದಲ್ಲಿ ಕರಾಟೆ ಕಾರ್ಯಾಗಾರ ಯಶಸ್ವಿ

# ಕರಾಟೆಯ ಪಾರಂಪರಿಕ ಉಳಿವಿನ ಅಗತ್ಯವಿದೆ: ಹಿಡಿಯೊ ಒಟಾನಬಿ



ದಾವಣಗೆರೆ, ಆ.12- ಕರಾಟೆ ಕಲೆಯಲ್ಲಿನ ತಪ್ಪು ತಿಳಿವಳಿಕೆ ಹೋಗಲಾಡಿಸಲು ಇಲ್ಲಿನ ನೇತಾಜಿ ಸುಭಾಶ್ಚಂದ್ರ ...ವಾಡ, ಹಾವೇರಿ, ಬೆಂಗಳೂರು, ಹುಬ್ಬಳ್ಳಿ, ಮೈಸೂರು ಇನ್ನಿತರೆಡೆಗಳಿಂದ ಸುಮಾರು 75 ಮಂದಿ ಕರಾಟೆ ಶಿಬಿರಾ...ಲೆಯಲ್ಲಿ ಈ ಕಾರ್ಯಾಗಾರ ನಡೆಸಲಾಗುತ್ತಿದೆ ಎಂದರು.

ಜಪಾನ್ ಇನ್ನಿತರ ದೇಶದಲ್ಲಿ